# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1494 |
| 2 | ಸದಸ್ಯರ ಹೆಸರು | ಶ್ರೀಮತಿ ವೀಣಾ ಅಚ್ಚಯ್ಯ<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | 10.03.2022 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿ ಕಾವೇರಿ ನದಿ ಗಡಿ ಗುರುತು ಸರ್ವೆ ಕಾರ್ಯ ನಡೆಯದಿರುವುದರಿಂದ ನದಿಯ ಸಂರಕ್ಷಣೆ ನದಿ ತಟಗಳ ಅಭಿವೃದ್ಧಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೊಡಗು ಪ್ರಾಂತ್ಯದಲ್ಲಿ ಮೂಲ ಸರ್ವೆ(ಸನ್ 1806-1816) ಮತ್ತು ರೀಸರ್ವೆ (ಸನ್ 1906-1912) ಕಾಲಕ್ಕೆ ಕೊಡಗು ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ಅಳತೆ ಕಾರ್ಯ ಕೈಗೊಂಡು ಗ್ರಾಮದ ಖಾಸಗಿ/ಸರ್ಕಾರಿ ಜಮೀನುಗಳು, ದಾರಿ ಹಳ್ಳ ಮತ್ತು ನದಿಯ ಗಡಿಗಳನ್ನು ಅಳತೆಯಿಂದ ಗುರ್ತಿಸಿದ್ದು, ಅದರಂತೆ ಕಾವೇರಿ ನದಿಯ ತಟಗಳನ್ನು ಗುರ್ತಿಸಿ ದಾಖಲೆಗಳನ್ನು ತಯಾರಿಸಲಾಗಿದ್ದು, ಅದರಂತೆ, ಗ್ರಾಮ ನಕಾಶೆಯಲ್ಲಿ ಸಹಾ ದಾಖಲಿಸಲಾಗಿದೆ.<br><br>ಪ್ರಸ್ತುತ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆರವರ ಸೂಚನೆ ಮೇರೆಗೆ ಕೊಡಗು ಜಿಲ್ಲೆಯ ಕಾವೇರಿ ನೀರಾವರಿ ನಿಗಮ ಮಡಿಕೇರಿ ವ್ಯಾಪ್ತಿಯ ತಾವೂರು ಮತ್ತು ಭಾಗಮಂಡಲ ಗಡಿಯಲ್ಲಿ ಕಂದಾಯ ಇಲಾಖೆಯೊಂದಿಗೆ ಜಂಟಿ ಸರ್ವೆ ಮಾಡಿ ಕಾವೇರಿ ನದಿ ಗಡಿ ಗುರ್ತಿಸುವ ಕಾರ್ಯಕೈಗೊಳ್ಳಲಾಗಿದೆ.<br><br>ಕೊಡಗು ಜಿಲ್ಲೆಯಲ್ಲಿನ ಕಾವೇರಿ ನದಿ ಗಡಿ ಅಳತೆ ಕುರಿತು ಸಂಬಂಧಿಸಿದ ಪ್ರಾಧಿಕಾರ/ಅಧಿಕಾರಿಗಳಿಂದ ಯಾವುದೇ ನಿರ್ದೇಶನ ಅಥವಾ ಕೋರಿಕೆ ಸ್ವೀಕೃತವಾಗಿರುವುದಿಲ್ಲ. |
| ಆ) | ಬಂದಿದ್ದಲ್ಲಿ, ಸರ್ಕಾರ ಯಾವ ಕಾಲಮಿತಿಯೊಳಗೆ ಕಾವೇರಿ ನದಿ ಗಡಿ ಗುರುತು ಸರ್ವೆ ಕಾರ್ಯ ಮಾಡುವುದು ಮತ್ತು ಆ ಮೂಲಕ ನದಿಯ ಸಂರಕ್ಷಣೆ, ನದಿ ತಟಗಳ ಅಭಿವೃದ್ಧಿ ಹಾಗೂ ನದಿಯ ತಟದಲ್ಲಿರುವ ಜನರಿಗೆ ಪುನರ್ವಸತಿ ಕಲ್ಪಿಸಲು ಕ್ರಮವಹಿಸುವುದೇ; | |
| ಇ) | ಕಾವೇರಿ ನದಿಯ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಸರ್ಕಾರ ಕಳೆದ 3 ವರ್ಷಗಳಲ್ಲಿ ಕೈಗೊಂಡಿರುವ ಕಾಮಗಾರಿಗಳಾವುವು ಹಾಗೂ ವಿನಿಯೋಗಿಸಿರುವ ಅನುದಾನವೆಷ್ಟು? (ವಿವರ ಒದಗಿಸುವುದು) | ಕಾವೇರಿ ನದಿಯ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br>**National Disaster Respond Fund (NDRD) ಲೆಕ್ಕಶೀರ್ಷಿಕೆಯಡಿ:**<br>1. ಕಾವೇರಿ ನದಿ ಪಾತ್ರದಲ್ಲಿ ಕುಶಾಲನಗರದ ಕೊಪ್ಪ ಸೇತುವೆ ಬಳಿ ನೀರಿನ ಹರಿವಿಗೆ ಅಡಚಣೆಯಾಗಿದ್ದ 4300 ಮೀ. ಉದ್ದಕ್ಕೆ ಹಾಗೂ ತಪೋವನದ ಬಳಿ 2000 ಮೀ. ಉದ್ದಕ್ಕೆ ಜೊಂಡು ಹಾಗೂ ಮಣ್ಣು ಮಿಶ್ರಿತ ಹೂಳು ತೆಗೆಯುವ ಕಾಮಗಾರಿಯನ್ನು ರೂ.88.00 ಲಕ್ಷಗಳಲ್ಲಿ 2020-21ನೇ ಸಾಲಿನಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ. |

| | | |
|---|---|---|
| | | 2. ಪ್ರಸಕ್ತ ಆರ್ಥಿಕ ವರ್ಷದಲ್ಲಿ ರೂ.50.00 ಲಕ್ಷ ಮೊತ್ತದ 3 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಪ್ರಸ್ತುತ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸ ಬೇಕಾಗಿರುತ್ತದೆ.<br>**ಕಾವೇರಿ ನೀರಾವರಿ ನಿಗಮದ ವತಿಯಿಂದ ಕೈಗೊಂಡಿರುವ ಕಾಮಗಾರಿಗಳು**:<br>ಕಾವೇರಿ ನದಿಯ ಉಗಮಸ್ಥಾನ ಭಾಗಮಂಡಲ ದಿಂದ 11.50 ಕಿ.ಮೀ., ಉಪನದಿ ಕನ್ನಿಕೆಯ 6.20 ಕಿ.ಮೀ. ಮತ್ತು ಇತರ ಉಪನದಿಗಳ 12.00 ಕಿ.ಮೀ. ವರೆಗೆ ನದಿಯ ನೀರಿನ ಹರಿವಿಗೆ ಅಡಚಣೆಯಾಗಿರುವ ಗಿಡಗಂಟೆಗಳು ಮತ್ತು ಜೊಂಡನ್ನು ತೆಗೆಯಲು ಕಾಮಗಾರಿಯನ್ನು ರೂ.79.18 ಲಕ್ಷಗಳಲ್ಲಿ 2020-21ನೇ ಸಾಲಿನಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ. |

**ಸಂಖ್ಯೆ: ಕಂಇ 72 ಎಸ್‌ಎಸ್‌ಸಿ 2022**

**(ಆರ್.ಅಶೋಕ)**
ಕಂದಾಯ ಸಚಿವರು